ಸದನವಿರುವುದು ಏತಕ್ಕೆ ಅಧ್ಯಕ್ಷರೇ? ನಾವೇನು ಮಾಡಬೇಕು ಈ ಸದನದಲ್ಲಿ? ಯಾವಾಗಲೂ ಇವರು ಬಂದು ಬಾವಿಗೆ ಬೀಳುವುದು, ಸದನವನ್ನು ಹಾಳು ಮಾಡುವುದು ಹೀಗೆ ಇವರು ಮಾಡುತ್ತಿದ್ದರೆ ನೀವು ಎಷ್ಟು ದಿವಸ ಇದನ್ನು ಸಹಿಸುತ್ತೀರಿ? ಇಲ್ಲದಿದ್ದರೆ ಇವತ್ತು ನಾವೂ ಬಾವಿಗೆ ಬರಬೇಕಾಗುತ್ತದೆ. ಇವತ್ತು ನಮ್ಮ ಸದನವನ್ನು ಹಾಳು ಮಾಡುತ್ತಿದ್ದಾರೆ. ದಯವಿಟ್ಟು ಇದನ್ನು ನಿಲ್ಲಿಸಿ ನಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು.

Mr. Speaker : I have allowed Mr. Sampangi to talk. ನಾಯ್ಡು ಅವರೇ, ದಯವಿಟ್ಟು ಇಲ್ಲಿ ಕೇಳಿ. ಸಂಪಂಗಿಯವರಿಗೆ ಮಾತನಾಡಲಿಕ್ಕೆ ನಾನು ಅನುಮತಿಯನ್ನು ಕೊಟ್ಟಿದ್ದೇನೆ. ಜಗದೀಶ್ ಶೆಟ್ಟರ್ ಅವರೇ ತಮ್ಮ ಸದಸ್ಯರಿಗೆ ಹೇಳಿ. ಏನಿದೆಲ್ಲಾ? ಒಬ್ಬ ಸದಸ್ಯರಿಗೆ ಮಾತನಾಡಲು ಅವರಿಗೆ ನಾನು ಅನುಮತಿ ಕೊಟ್ಟಾಗ ಮಧ್ಯೆ ಹೀಗೆ ಗೊಂದಲ ಮಾಡುವುದು ಸರಿಯಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಸಂಪಂಗಿಯವರು ಏನು ವಿಷಯಗಳನ್ನು ಹೇಳಿದರು, ಇದರ ಬಗ್ಗೆ ಸರ್ಕಾರವು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಅವರು ಏನು ಕೆಲವು ವಿಷಯಗಳ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದರು, ನಾನೂ ಸಹ ಅದೇ ವಿಷಯಗಳ ಬಗ್ಗೆ ಮೊನ್ನೆ ಸದನದಲ್ಲಿ ಕಳಕಳಿ ವ್ಯಕ್ತಪಡಿಸಿದ್ದೇನೆ. ಇಡೀ ರಾಜ್ಯದಲ್ಲಿ ಬರಗಾಲದ ಬವಣೆ, ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ, ಬೆಳೆ ವಿಮೆಯನ್ನು ಬಿಡುಗಡೆ ಮಾಡಿಲ್ಲ. ಹಳದಿ ಕಾರ್ಡಿನ ತೊಂದರೆಯನ್ನು ಬಡವರು ಅನುಭವಿಸುತ್ತಿದ್ದಾರೆ, ವಿದ್ಯುತ್ತಿನ ಅಭಾವ, ಈ ವಿಷಯಗಳನ್ನು ಚರ್ಚೆ ಮಾಡಬೇಕೆಂದು ಇವತ್ತು ನಮಗೂ ಮನಸ್ಸಿದೆ. ಆದರೆ ಈ ಸರ್ಕಾರವು ಭ್ರಷ್ಟಾಚಾರದ ಕೂಪದಲ್ಲಿ ಬಿದ್ದುಬಿಟ್ಟಿದೆ. ಇವತ್ತು ಇದರ ಬಗ್ಗೆ ಸರಿಯಾಗಿ ಸ್ಪಂದನ ಮಾಡಲಿಕ್ಕೂ ತಯಾರಿಲ್ಲ. ಮೊನ್ನೆ ಈ ಬಗ್ಗೆ ಪತ್ರಿಕೆಗಳಲ್ಲಿ ಬಂದಂತಹ ಒಂದೆರಡು ಮೂರು ಶಬ್ದಗಳನ್ನು ಇವತ್ತು ಓದುತ್ತಿದ್ದೇನೆ. ಇವತ್ತು ಜೈಲಿನಲ್ಲಿರುವ ಕರೀಂಲಾಲ್ ಸ್ಟೇಟ್‌ಮೆಂಟ್ ಕೊಡಲಿಕ್ಕೆ ತಯಾರಿದ್ದಾನೆ. ಇವತ್ತು ಅವನು ಕನ್‌ಫೆಸ್ ಸ್ಟೇಟ್‌ಮೆಂಟ್ ಕೊಡಲಿಕ್ಕೂ ತಯಾರಿದ್ದಾನೆ.

ಶ್ರೀ ಎನ್.ಸಂಪಂಗಿ : ಅಧ್ಯಕ್ಷರೇ, ಇವತ್ತು ಬರ್ ಇದೆ, ಬರದ ವಿಚಾರ ಇವರು ಮಾತನಾಡಲಿ, ಇವತ್ತು ಪ್ರಶ್ನೋತ್ತರದಲ್ಲಿ ಬರದ ವಿಚಾರ ಇದೆ, ಅದಕ್ಕೆ ಅವಕಾಶವನ್ನು ಕೊಡಿ ಅಧ್ಯಕ್ಷರೇ, ಇದು ಬಹಳ ಅನ್ಯಾಯವಿದು. 24 ಜನ ಸದಸ್ಯರಿಗೋಸ್ಕರ 200 ಜನ ಸದಸ್ಯರನ್ನು ಕಡೆಗಣಿಸುತ್ತಿದ್ದೀರಿ, ಇದು ಸರಿಯಲ್ಲ. ಇವತ್ತು ಸದನದ ಕಲಾಪಕ್ಕೆ ಅಡ್ಡಿಮಾಡುತ್ತಿರುವವರನ್ನು ಹೊರಗೆ ಕಳುಹಿಸಿ, ಸದನಕ್ಕೆ ಅಗೌರವವನ್ನು ತೋರಿಸುತ್ತಿರುವವರ ವಿರುದ್ಧ ಕ್ರಮ ಕೈಗೊಂಡು ಕಲಾಪವನ್ನು ನಡೆಸಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದನ್ನು ಮುಂದುವರಿಸಲಿಕ್ಕೆ ಅವಕಾಶ ಕೊಡಬೇಡಿ, ಇವತ್ತು ಮಾನ್ಯ ಗೃಹಸಚಿವರು ಇದರ ಬಗ್ಗೆ ಶ್ವೇತಪತ್ರವನ್ನು ಕೊಟ್ಟಿದ್ದಾರೆ. ಇದರ ಪ್ರಕಾರ ಎಲ್ಲಾ ನಡೆದುಹೋಗಿದೆ. ಇನ್ನು ಏನು ಬೇಕಾಗಿದೆ ಇವರಿಗೆ? ದಯವಿಟ್ಟು ಇದನ್ನೆಲ್ಲಾ ನಿಲ್ಲಿಸಿ; ಇಲ್ಲವಾದರೆ ರೈತರು ಇದರ ಬಗ್ಗೆ ವಿರೋಧಿಸಬೇಕಾಗುತ್ತದೆ. ಒಂದು ಕಡೆ ಕೋಮುಗಲಭೆಗೆ ಪ್ರಚೋದನೆಯನ್ನು ಕೊಡುತ್ತಾರೆ. ಮತ್ತೊಂದು ಕಡೆ ರೈತರ ಹೆಸರು ಹೇಳುತ್ತಾ ಅವರ ಅಧಿಕಾರವನ್ನು ಕಿತ್ತುಕೊಳ್ಳುತ್ತಿದ್ದಾರೆ. ಇವತ್ತಾದರೂ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಡಲಿ, ಕೇವಲ ಛಾಪಾ ಕಾಗದದ ನೆಪದಲ್ಲಿ ವಿಧಾನಸಭೆಯ ಸಮಯವನ್ನು ಹಾಳುಮಾಡುತ್ತಿದ್ದಾರೆ. ಛಾಪಾ ಕಾಗದದ ಬಗ್ಗೆ ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ಇನ್ನೂ ಏನು ಬೇಕು ಇವರಿಗೆ? ದಯವಿಟ್ಟು ಇವತ್ತು ಪ್ರಶ್ನೋತ್ತರ ನಡೆಯಲಿ, ನಂತರ ಇವರಿಗೆ ಅವಕಾಶ ಕೊಡಿ.

2. ಛಾಪಾ ಕಾಗದ ಹಗರಣದ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಶಾಸಕರ ಕಳಕಳಿಯನ್ನು ನಾನು ಇವತ್ತು ಅರ್ಥಮಾಡಿಕೊಳ್ಳುತ್ತಿದ್ದೇನೆ. ಸರ್ಕಾರ ಇವತ್ತು ಛಾಪಾ ಕಾಗದದ ಹಗರಣದ ಬಗ್ಗೆ ಸ್ಪಷ್ಟವಾದ ಭರವಸೆಯನ್ನು, ಸ್ಪಷ್ಟವಾದಂಥ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಇವತ್ತು ಹಲವಾರು ಹೇಳಿಕೆಗಳು ಹೊರಬಂದಿವೆ. ಮೊನ್ನೆ ವಿಷ್ಯನ್ ವಿಜ್ ಪತ್ರಿಕೆಯಲ್ಲಿ ಈ ಬಗ್ಗೆ ಬಂದ ಒಂದು ಹೇಳಿಕೆಯನ್ನು ತಮ್ಮ ಮುಂದೆ ಓದಿದರೆ ಇದರ ನಿಗೂಢತೆ ತಮಗೆ ಅರ್ಥವಾಗುತ್ತದೆ.

Stamp paper racket kingpin Karim Lala Telgi is ready to make a confessional statement and exposed all the "big sharks". ದೊಡ್ಡ ದೊಡ್ಡ ತಿಮಿಂಗಲಗಳು ಇಲ್ಲಿವೆ, ಆ ತಿಮಿಂಗಲಗಳನ್ನು ಇವತ್ತು ಇವರು ಇನ್ನೂ ಅರೆಸ್ಟ್ ಮಾಡಿಲ್ಲ. Karim Lala Telgi is ready to make a confessional statement and expose all the "big sharks" involved in the multicrore rupee scam, according to his lawyer, Mr. Abdul Rehman.

Mr. Rehman, who was in Bangalore recently, says he met Telgi on January 5 and persuaded him to make the statement which he agreed to do on the condition that it was recorded before a senior police officer in the lawyer's presence.

Telgi has given the lawyer a written statement, in which he says " I love my country more than anybody else. I am willing to help safeguard the economy of the country by exposing all the roots of this scandal of forged stamps and the big sharks involved in this racket."

ಶ್ರೀ ಎನ್. ಸಂಪಂಗಿ : ನಾನು ಸ್ವತಂತ್ರವಾಗಿ ಗೆದ್ದು ಬಂದಿದ್ದೇನೆ. ಬಾವಿಯಲ್ಲಿರುವವರು ಸುಮ್ಮನೆ ಕುಳಿತುಕೊಳ್ಳಿರಿ. ನನ್ನ ಬಗ್ಗೆ ಮಾತನಾಡುವ ಹಕ್ಕು ನಿಮಗಿಲ್ಲ. ಸುಮ್ಮನೆ ಇಲ್ಲಿ ಪೇಪರ್‌ಗಳನ್ನು ಹಿಡಿದುಕೊಂಡು ಬಂದು ರಾಜಕೀಯ ಮಾಡಿ ಚುನಾವಣೆ ದೃಷ್ಟಿಯಿಂದ ಮಾಡುತ್ತಿದ್ದಾರೆ. ಇವರು ನಿಜವಾಗಿಯೂ ರೈತರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿದ್ದರೆ ಇವತ್ತು ಸದನದಲ್ಲಿ ಚರ್ಚೆಗೆ ಅವಕಾಶವನ್ನು ಕೊಡಲಿ. ಇವತ್ತು ನಮ್ಮ ಗೌರವಕ್ಕೆ ಕುಂದು ತರುತ್ತಿದ್ದಾರೆ. ನಾವೂ ಕೂಡ ಇದರಿಂದ ಬಾವಿಯೊಳಗೆ ಇಳಿಯಬೇಕಾಗುತ್ತದೆ.

(ಗೊಂದಲ)

ಶ್ರೀ ಎನ್. ಸಂಪಂಗಿ : ಇವರು ನಾಟಕವಾಡುತ್ತಿದ್ದಾರೆ. ಇವರು ರೈತರ ಸಮಸ್ಯೆಯ ಬಗ್ಗೆ ಮಾತನಾಡದೆ ನಾಟಕವಾಡುತ್ತಿದ್ದಾರೆ, ಛಾಪಾ ಕಾಗದದ ಹಗರಣವನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಆವತ್ತು ನೀವು ಕರೀಂಲಾಲಾ ಅನ್ನು ಲಾವಾ ಲಾವಾ ಅಂತ ಮಾಡಿದವರು ನೀವೇ. ಅವತ್ತು ಕೇಂದ್ರ ಸರ್ಕಾರದವರು ಲಾವಾ ಅಂತ ಮಾಡಿದ್ದವರು ಇವತ್ತು ಕರೀಂಲಾಲ ಅಂತ ಮಾಡಿಬಿಟ್ಟಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, In a letter.....

ಅಧ್ಯಕ್ಷರು : ಓದಿ ಹೇಳಿದ್ದೀರಲ್ಲಾ.

(ಗೊಂದಲ)

ಶ್ರೀ ಎನ್. ಸಂಪಂಗಿ: ಅವರು ವಾಚಕರ ವಾಣಿ ಓದಲಿ. ಮಾನ್ಯ ಅಧ್ಯಕ್ಷರೇ, ಪಕ್ಕದಲ್ಲಿ ಗ್ರಂಥಾಲಯ ಇದೆ. ಅಲ್ಲಿಗೆ ಮಾನ್ಯ ಜಗದೀಶ ಶೆಟ್ಟರ್ ಹೋಗಲಿ.....

(ಗೊಂದಲ)

ಅಧ್ಯಕ್ಷರು : ನೋಡಿ ಮಂತ್ರಿಗಳು ಇದ್ದಾರೆ. ಒಬ್ಬೊಬ್ಬರು ಮಾತನಾಡಿ. ಸರ್ಕಾರದ ಪರವಾಗಿ 3–4 ಜನ ಮಂತ್ರಿಗಳು ಇದ್ದಾರೆ. ಅವರು ಸರ್ಕಾರದ ಪರವಾಗಿ ಉತ್ತರ ಹೇಳುತ್ತಾರೆ. ಮಾನ್ಯ ಖರ್ಗೆಯವರೇ ಬರಬೇಕೆಂದು ಕಾನೂನು ಏನೂ ಇಲ್ಲ. ಬೇರೆ ಮಂತ್ರಿಗಳು ಇದ್ದಾರೆ. ಅವರು ಉತ್ತರ ಹೇಳುತ್ತಾರೆ. ತಾವು ಮಾತನಾಡಿ. He is coming.

(ಗೊಂದಲ)

Sri Jagadish Shettar : Telgi has given the lawyer a written statement, available with The Asian Age, in which he says, "I love my country.....

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಬಂದಂತಹ ವಿಷಯ ಹೇಳುತ್ತಿದ್ದಾರೆ.....

(ಗೊಂದಲ)

Sri Jagadish Shettar : Telgi Says, " I love my country more than anybody else. I am willing to help safeguard the economy of the country by exposing all the roots of this scandal of forged stamps and the big sharks involved in this racket." In the letter that Telgi has signed, the Kingpin adds, " I know I am going to die of HIV/AIDS and I want to do all this by way of repentance. Everyone should get punishment for what he has done and no more. I sincerely wish to expose this entire racket of forged stamps...

ಶ್ರೀ ಎನ್. ಸಂಪಂಗಿ : ಎಲ್ಲರಿಗೂ ಪೇಪರ್ ತಂದು ಕೊಟ್ಟುಬಿಡಿ. ಓದಿಕೊಳ್ಳುತ್ತಾರೆ.

Sri Jagadish Shettar : and I am ready to make a full statement on the condition that Mr. Abdul Rehman should be present."

Mr. Speaker : I have read it yesterday alone.

Sri Jagadish Shettar : In a footnote to the letter, Telgi adds, " I have told my advocate Abdul Rehman everything and he will make a necessary statement.....

ಶ್ರೀ ಎನ್. ಸಂಪಂಗಿ : ನಿಮಗೆ ಏನೂ ಬೇಕಾಗಿಲ್ಲ. ನೀವು ಬರೀ ಕೋಮುವಾದಿಗಳು ರಾಜಕೀಯ ತಂತ್ರ ಇಷ್ಟೇ ಬೇಕಾಗಿರುವುದು ನಿಮಗೆ .....

Sri Jagadish Shettar : He had met frequently. This is very important. Telgi had told him about his association with former Karnataka

Minister Roshan Baig, whom he said he had met frequently since 1997-1998. That year, Telgi maintains, Baig met him both in Mumbai and Bangalore. Since 1999 Telgi had booked a room permanently at Hotel Taj Mahal in Mumbai.

ಅಧ್ಯಕ್ಷರು : ಆಯಿತು. ನಾನು ಎದ್ದು ನಿಂತು ಮಾತನಾಡುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಓದಿ ಆಗಿದೆ. ನಾವು ಕೇಳುತ್ತಿದ್ದೇವೆ. You please listen to me. ಅವರು ಗಲಾಟೆ ಮಾಡಿದರೆ ನಾನು ಸುಮ್ಮನೇ ಇರುವುದಿಲ್ಲ. ನಿಮ್ಮ ಮೆಂಬರ್ಸ್‌ಗೆ ಸ್ವಲ್ಪ ಹೇಳಿ.

(ಗೊಂದಲ)

ಅಧ್ಯಕ್ಷರು : ಸುಮ್ಮನೇ ಇರುವುದಕ್ಕೆ ಹೇಳಿ. ಮಾನ್ಯ ಸಂಪಂಗಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ನನಗೆ ಬೇಕಾಗಿರುವುದು ಬಿಜಿನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್‌ನಲ್ಲಿ ಕಾರ್ಯಕ್ರಮ ಪಟ್ಟಿಯನ್ನು ಏನು ಮಾಡಿದ್ದೇವೆ, ಆ ಪ್ರಕಾರ ಕ್ರಮ ಕೈಗೊಳ್ಳುವುದು ನನ್ನ ಕರ್ತವ್ಯ. ಆ ಕರ್ತವ್ಯಕ್ಕೆ ನೀವು ದಾರಿ ಮಾಡಿಕೊಡುತ್ತೀರೋ ಇಲ್ಲವೋ ಅಷ್ಟೇ ನನಗೆ ಬೇಕಾಗಿರುವುದು. ಅದಕ್ಕೆ ದಾರಿ ಮಾಡಿಕೊಡುತ್ತೀರೋ ಇಲ್ಲವೋ ಅಷ್ಟು ಹೇಳಿ. ನಾನು ಸರ್ಕಾರದ ಮೇಲೆ ಒತ್ತಡ ಹಾಕುವುದಕ್ಕೆ ಬರುವುದಿಲ್ಲ. ಆ ರೀತಿ ಉತ್ತರ ಕೊಡಿ, ಈ ರೀತಿ ಉತ್ತರ ಕೊಡಿ ಎಂದು. I cannot compel a Minister to reply like this and all those things. I want to implement the Business Advisory Committee meeting decission. ಇಂಪ್ಲಿಮೆಂಟ್ ಮಾಡಬೇಕು ಅಷ್ಟೇ ನನ್ನ ಕೆಲಸ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಸರ್ಕಾರ ನಿಮಗೆ ಸಹಕಾರ ಕೊಡಬೇಕು. ಸರ್ಕಾರ ನಿಮಗೆ ಸಹಕಾರ ಕೊಡುತ್ತಿಲ್ಲ. ಇಂತಹ ಕೆಲವು ಸೀರಿಯಸ್ ಆದ ಅಲಿಗೇಶನ್ಸ್ ಮಾಡುತ್ತಿದ್ದೇವೆ. ಇವತ್ತು ಮಾನ್ಯ ರೋಶನ್ ಬೇಗ್‌ರನ್ನು ಅರೆಸ್ಟ್ ಮಾಡಿ ಎಂದು ಹೇಳುತ್ತಿದ್ದೇವೆ. ಮಾಡುತ್ತಿಲ್ಲ. ರೋಶನ್ ಬೇಗ್‌ರನ್ನು ಏತಕ್ಕೆ ಅರೆಸ್ಟ್ ಮಾಡುತ್ತಿಲ್ಲ?....

(ಗೊಂದಲ)

ಅಧ್ಯಕ್ಷರು : ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಏನು ತೀರ್ಮಾನವಾಗಿದೆಯೋ ಅದನ್ನು ಇಂಪ್ಲಿಮೆಂಟ್ ಮಾಡುವುದು ನನ್ನ ಕರ್ತವ್ಯ. That is all I can say. ಸರ್ಕಾರವನ್ನು ನಾನು ಕಂಪೇಲ್ ಮಾಡುವುದಕ್ಕೆ ಆಗುವುದಿಲ್ಲ. ಇದೇ ರೀತಿ ಉತ್ತರ ಕೊಡಿ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. I cannot. No, I have no jurisdiction to compel the Minister to reply like this or that.

Sri Jagadish Shetter : Taj Mahal in Mubai for Roshan Baig, where he used to stay," Mr. Rehman claimed....

ಅಧ್ಯಕ್ಷರು : ದಿನ ಬೆಳಗಾದರೆ ಇದೇ ಆಗಿಬಿಟ್ಟಿದೆ. ಜನ ಏನು ಅಂದುಕೊಳ್ಳುತ್ತಾರೆಂದೂ ಸಹ ಅರ್ಥವಾಗುವುದಿಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಮಂತ್ರಿಗಳು ಬರಬೇಕಲ್ಲವೇ? ಮಾನ್ಯ ಮಂತ್ರಿಗಳು ಎಲ್ಲಿ ಹೋಗಿದ್ದಾರೆ?

(ಗೊಂದಲ)

ಅಧ್ಯಕ್ಷರು : ಸ್ವಾಮಿ, ಇಲ್ಲಿ ಸ್ವಲ್ಪ ಕೇಳಿ. ಸಿಂಗಪೂರ್‌ನಿಂದ ಮಾನ್ಯ ಡೆಪ್ಯುಟಿ ಪ್ರೈಮ್ ಮಿನಿಸ್ಟ್ ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅವರ ಜೊತೆ ಇದ್ದಾರೆ. ಅವರು ಬರುತ್ತಿದ್ದಾರೆ. He is coming.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗೃಹಸಚಿವರು ಎಲ್ಲಿದ್ದಾರೆ?

ಅಧ್ಯಕ್ಷರು : ಅವರು ಬರುತ್ತಿದ್ದಾರೆ.

Sri Jagadish Shettar : Telgi was having a permanent room, at Taj Mahal in Mumbai for Roshan Baig, where he used to stay. According to him Telgi confirmed that the Minister met him in May, July and October 1999 and in January 2000, at the Taj Mumbai. ತಾಜ್ ಹೋಟೆಲ್‌ನಲ್ಲಿ ಭೇಟಿಯಾಗಿದ್ದರ ಬಗ್ಗೆ ನಾವು ಎರಡು ವರ್ಷಗಳಿಂದ ಹೇಳುತ್ತಿದ್ದೇವೆ. ರೋಶನ್ ಬೇಗ್ ಅವರ ಟಿ.ಪಿ. ಕಳುಹಿಸಿಕೊಡಬೇಕೆಂದರೆ ಅದನ್ನು ಕಳುಹಿಸಿ ಕೊಡಲಿಲ್ಲ. ಇವತ್ತು ಅವರೇ ಹೇಳುತ್ತಿದ್ದಾರೆ. ಇವತ್ತು ಮುಂಬೈನ ತಾಜ್ ಹೊಟೇಲ್‌ನಲ್ಲಿ 2–3 ಸಲ ರೋಶನ್ ಬೇಗ್‌ರನ್ನು ಭೇಟಿಯಾಗಿದ್ದರ ಬಗ್ಗೆ ಅಡ್ಮಿಟ್ ಮಾಡುತ್ತಿದ್ದಾರೆ. According to him, Telgi. confirmed that the Minister met him in May, July and October 1999 and in January 2000, at the Taj Mumbai where the kingpin registered under the assumed name Ahmed Patel. " On the say-so of Telgi, Roshan Baig gave his right hand man, Badruddin (now in Stampit custody and an accused in the stamp paper racket) and his wife shelter in his house. ರೋಶನ್ ಬೇಗ್ ಅವರು ಈ ಆರೋಪಿಗಳಿಗೆ ಶೆಲ್ಟರ್ ಕೊಟ್ಟಿದ್ದಾರೆ. ಇನ್ನೂ ಕ್ರಿಮಿನಲ್ ಕೇಸ್ ಹಾಕುವುದಿಲ್ಲವೆಂದರೆ ಏನು ಅರ್ಥ ಇದು? ಇಷ್ಟೆಲ್ಲಾ ಅಡ್ಮಿಟ್ ಮಾಡಿದ ಮೇಲೂ ಇವತ್ತಿಗೂ ಕ್ರಿಮಿನಲ್ ಕೇಸ್ ಫೈಲ್ ಮಾಡುವುದಕ್ಕೆ ತಯಾರಿಲ್ಲ. ಅವರಿಗೆ ಶೆಲ್ಟರ್ ಕೊಟ್ಟಿದ್ದಾರೆ.

ಅಧ್ಯಕ್ಷರು : ನಾನು ಹೇಳುವುದು ಬಿ ಎ ಸಿ ಮೀಟಿಂಗ್‌ನಲ್ಲಿ ಏನು ಆಗಿದೆಯೋ ಅದನ್ನು ಇಂಪ್ಲಿಮೆಂಟ್ ಮಾಡುವುದು ನನ್ನ ಕರ್ತವ್ಯ. ಈಗ ಮೊದಲನೇ ಕಾರ್ಯಕ್ರಮ ಪ್ರಶ್ನೋತ್ತರ ವೇಳೆ. ಪ್ರಶ್ನೋತ್ತರ ವೇಳೆ ತೆಗೆದುಕೊಳ್ಳುವುದು .

Sri Jagadish Shettar : The Bangalore Police is aware of this. He added that records were available.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಬಂದಿದ್ದು ಎಲ್ಲವನ್ನೂ ತಂದು ಇಲ್ಲೇ ಓದಿಕೊಂಡು ನಿಲ್ಲಬೇಕೆಂದರೆ ತಾವು ಅಲೋ ಮಾಡಿದರೆ ಮಾಡಿ. ಅವರು ರೈಜ್ ಮಾಡಿದಾಗ ನಾವು ಉತ್ತರ ಕೊಟ್ಟಿದ್ದೇವೆ. ಈಗಾಗಲೇ ಅದನ್ನು ಸಿಬಿಐ ಗೆ ವಹಿಸಿಕೊಡಿ ಎಂದು ಹೇಳಿದ್ದರು. ನಾವು ಸಿ.ಬಿ.ಐ.ಗೆ ವಹಿಸಿ ಕೊಟ್ಟಿದ್ದೇವೆ. ಇದರ ಮಧ್ಯೆ ಸ್ಟ್ಯಾಂಪಿಟ್‌ನವರೂ ಸಹ ಇದರ ಬಗ್ಗೆ ಅವರು ತನಿಖೆ ನಡೆಸಿದ್ದಾರೆ. ಅದನ್ನು ಬಿಟ್ಟು ಪದೇ ಪದೇ ಈ ಸರ್ಕಾರ ಹೀಗೆ ಮಾಡಿದೆ, ಈ ಸರ್ಕಾರವೇ ಇದೆ ಅಂದರೆ ಏನು ಅರ್ಥ? ಅಂದರೆ ಇಲ್ಲಿ ಎಲ್ಲಾ ಬೇರೆ ವಿಚಾರಗಳನ್ನು

ಮಂಡಿಸತಕ್ಕಂಥಾದ್ದು ಬಿಟ್ಟು ಇದು ಒಂದೇ ವಿಷಯದ ಮೇಲೆ ರಾಜಕೀಯವಾಗಿ ಮಾಡಿಕೊಳ್ಳುತ್ತಾ ಹೋದರೆ ಇದಕ್ಕೇನೂ ಅರ್ಥವಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ರಾಜಕೀಯವಾಗಿ ನೀವು ಮಾಡುತ್ತಿದ್ದೀರಿ. ಉದ್ದೇಶಪೂರ್ವಕವಾಗಿ ಅವರನ್ನು ರಕ್ಷಣೆ ಮಾಡುತ್ತಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಸಿಬಿಐ ಗೆ ಕೊಟ್ಟಿದ್ದೇವೆ. ಪತ್ರಿಕೆಯಲ್ಲಿ ಬಂದಿದ್ದನ್ನು ನಾವು ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೆಂದಲ್ಲ. ಪತ್ರಿಕೆಯಲ್ಲಿ ಬಂದಿದ್ದನ್ನು ಈಗಾಗಲೇ ಸ್ಟ್ಯಾಂಪಿಟ್‌ನವರು ಗಮನಕ್ಕೆ ತೆಗೆದುಕೊಂಡು ಮುಂದಿನ ಆಕ್ಷನ್ ಅವನು ಕರೀಂಲಾಲ ಏನು ಅಡ್ಮಿಟ್ ಮಾಡುತ್ತಾನೋ ಬಿಡುತ್ತಾನೋ ಇಲ್ಲವೋ ಅವನು ಸಿಬಿಐ ಮುಂದೆ ಅಡ್ಮಿಟ್ ಮಾಡುತ್ತಾನೋ, ಇವರ ಮುಂದೆ ಅಡ್ಮಿಟ್ ಮಾಡುತ್ತಾನೋ ಯಾರ ಮುಂದೆ ಮಾಡುತ್ತಾನೋ ಮಾಡಲಿ. ಅದು ಹೊರಗೆ ಬರುತ್ತದೆ. ಏಕೆ ಇಷ್ಟೊಂದು ಸುಮ್ಮನೆ ಪತ್ರಿಕೆ ಆಧಾರದ ಮೇಲೆ ಹೇಳಿಕೊಳ್ಳುತ್ತೀರಿ. ಬರಲಿ. ರೋಶನ್ ಬೇಗ್ ಇರಲಿ ಯಾವ ಬೇಗ್ ಇರಲಿ ಕಾನೂನಿನ ಪ್ರಕಾರ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ. ನಾವು ಈಗ ಯಾರಿಗೂ ಹೆದರಿ ಕೂರುವುದಿಲ್ಲ. ಯಾರಿಗೂ ಬೆದರುವುದಿಲ್ಲ. ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಕ್ರಮ ಜರುಗಿಸುತ್ತೇವೆ. ಅದಕ್ಕೆ ಸಿ.ಬಿ.ಐ. ಇದೆ. ಕೋರ್ಟ್ ಇದೆ. ಸ್ಟ್ಯಾಂಪಿಟ್ ಇದೆ. ಮತ್ತೇನು ಬೇಕು?

(ಗೊಂದಲ)

ಅಧ್ಯಕ್ಷರು : ನಿಮ್ಮದು ಆಯಿತಲ್ಲ? ಅವರಿಗೂ ಸ್ವಲ್ಪ ಸಮಯ ಕೊಡೋಣ.

ಶ್ರೀ ಜಗದೀಶ್ ಶೆಟ್ಟರ್ : ಕರೀಂಲಾಲ್ ಹೇಳಿದ್ದಾರೆ. ಬಾಂಬೆಯಲ್ಲಿ ತಾಜ್ ಹೋಟೆಲ್‌ನಲ್ಲಿ ಇದರ ಬಗ್ಗೆ ವ್ಯವಹಾರ ಮಾಡಿದ್ದರ ಬಗ್ಗೆ ಕ್ಲಿಯರ್ ಕಟ್‌ಆಗಿ ಹೇಳಿದ್ದಾರೆ. ಅದನ್ನು ಹೇಳಿದ್ದರೂ ಇವತ್ತು ಅವರನ್ನು ಅರೆಸ್ಟ್ ಮಾಡುವಹಾಗಿಲ್ಲ, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುವುದಿಲ್ಲ ಎಂದರೆ ಇದರ ಅರ್ಥ ಏನಾಗುತ್ತದೆ? ಇದರ ಅರ್ಥ ಏನಾಗುತ್ತದೆ ಎಂದರೆ ಅವರಿಗೆ ರಕ್ಷಣೆ ಕೊಡಲಿಕ್ಕೆ ಹೊರಟಿದ್ದಾರೆ. ಇವತ್ತಿಗೂ ಕ್ರಿಮಿನಲ್ ಕೇಸ್ ಹಾಕಲಿಕ್ಕೆ ಇವರು ತಯಾರಿಲ್ಲ.....

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಶೆಟ್ಟರ್‌ರವರೇ, ಅದನ್ನು ಸಿ.ಬಿ.ಐ.ನಿಂದಲೇ ಹಾಕಿಸಿ. ಅದನ್ನು ನಿಮ್ಮ ಕೈಯಲ್ಲೇ ಕೊಟ್ಟಿದ್ದಾರಲ್ಲಾ?

ಅಧ್ಯಕ್ಷರು : ಪ್ರತಿ ದಿವಸವೂ ಪತ್ರಿಕೆಯಲ್ಲಿ ಬರುವುದು ಇಲ್ಲಿ ಚರ್ಚೆಗೆ ಬರುತ್ತದೆ. ನಮಗೆ ಪ್ರತಿದಿವಸವೂ ಇದೇ ಕೆಲಸವೇನು? ಪತ್ರಿಕೆಯಲ್ಲಿ ಬಂದಿರುವುದದನ್ನು ಇಲ್ಲಿ ಓದುವುದು ಆಗಿದೆ. ಪ್ರತಿ ದಿವಸ ಪತ್ರಿಕೆಯಲ್ಲಿ ಬಂದಿರುವುದನ್ನು ಓದುವುದಾದರೆ ನಮ್ಮ ಕೆಲಸವನ್ನು ಮಾಡುವುದು ಹೇಗೆ? ನನಗಿಷ್ಟೇ ಬೇಕಾಗಿರುವುದು. ಬಿ.ಎ.ಸಿ. ಮೀಟಿಂಗ್‌ನಲ್ಲಿ ಏನಾಗಿದೆ ಅದನ್ನು ನಾನು ಇಂಪ್ಲಿಮೆಂಟ್ ಮಾಡಬೇಕು. ನೀವು ಅಲೋ ಮಾಡುತ್ತೀರೋ ಇಲ್ಲವೋ ಅದನ್ನು ಹೇಳಿ. I want that. I don't want this kind of attitude everyday. ಪ್ರತಿದಿವಸವೂ ಇದೇರೀತಿ ನಡೆದರೆ ಹೇಗೆ? ನೋಡಿ, ನೀವೆಲ್ಲಾ ಸರ್ವಾನುಮತವಾಗಿ ಒಪ್ಪಿಕೊಂಡಿರುವುದು ಬಿ.ಎ.ಸಿ.ಯಲ್ಲಿ ಏನೇನು ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕೆಂದು. ಅದರ ಪ್ರಕಾರ ಇವತ್ತು ಪ್ರಶ್ನೋತ್ತರ

ವೇಳೆ ಇದೆ. ಅದನ್ನು ಈಗ ತೆಗೆದುಕೊಳ್ಳಬೇಕು. ಈ ಪ್ರಶ್ನೋತ್ತರ ವೇಳೆಗೆ ನೀವು ಅವಕಾಶ ಮಾಡಿಕೊಡುತ್ತೀರೋ ಇಲ್ಲವೋ ಅಷ್ಟು ಹೇಳಿ. That is all I want.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಯಾರು ತಪ್ಪು ಮಾಡುತ್ತಿದ್ದಾರೆ, ಯಾರು ಭ್ರಷ್ಟಾಚಾರಿಗಳು ಇದ್ದಾರೆ ಅವರ ಮೆಲೆ ಕಾನೂನು ಕ್ರಮ ಕೈಗೊಳ್ಳುತ್ತಿಲ್ಲ. ಆದ್ದರಿಂದ ನಾವು ನಮ್ಮ ಧರಣಿಯನ್ನು ಮುಂದುವರೆಸುತ್ತಿದ್ದೇವೆ.

Mr. Speaker : I cannot compel. ನಾನು ಸರ್ಕಾರವನ್ನು ಇದೇ ರೀತಿ ಉತ್ತರ ಕೊಡಬೇಕು ಎಂದು ಹೇಳುವುದಕ್ಕಾಗುವುದಿಲ್ಲ. ನನಗೆ ಆ ಅಧಿಕಾರವೇ ಇಲ್ಲ. ಉತ್ತರ ಎಷ್ಟು ಬೇಕೋ ಅಷ್ಟನ್ನೂ ಅವರು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಇವರಿಗೆ ಚರ್ಚೆ ಮಾಡುವಂಥಾದ್ದು ಬೇಕಾಗಿಲ್ಲ. ಇದು ಮೊಂಡುತನ ಮಾಡುವಂಥಾದ್ದು. ಇವರು ಯಾವುದೇ ರೀತಿಯ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಇವರು ಭ್ರಷ್ಟ ವ್ಯಕ್ತಿಗಳನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದಾರೆ, ಅಷ್ಟೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಸನ್ಮಾನ್ಯ ಅಧ್ಯಕ್ಷರೇ, ಪ್ರತಿ ದಿವಸವೂ ಈ ರೀತಿ ರಾಜಕೀಯ ಉದ್ದೇಶದಿಂದ ಧರಣಿ ಮಾಡಿಕೊಂಡು ಸಭೆಯಲ್ಲಿ ಬಂದಿರತಕ್ಕಂಥ ಬಹಳ ಮುಖ್ಯವಾದ ವಿಷಯಗಳ ಚರ್ಚೆಯನ್ನು ಬಿಟ್ಟು ಇದೇ ಮಾಡುವುದಾದರೆ ಕಾರ್ಯಕಲಾಪಗಳು ಹೇಗೆ ಸ್ವಾಮಿ ನಡೆಯಬೇಕು? ಅದರ ಬದಲು ನಾವು ನಮ್ಮನಮ್ಮ ಕ್ಷೇತ್ರಗಳಿಗೆ ಹೋಗಿ ಕೆಲಸ ಮಾಡಬಹುದು. ಇದಕ್ಕೆ ಒಂದು ಲಿಮಿಟ್ ಇದೆ. ಈ ಲಿಮಿಟ್ ಬಿಟ್ಟು ಇದೇ ಮಾಡುವುದಾದರೆ ಸದನ ಏಕೆ ಬೇಕು?

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಇವರು ಮಾತನಾಡುವಾಗ ನಾವು ಸುಮ್ಮನೆ ಇರಲಿಲ್ವಾ? ನಿಮ್ಮ ನಾಯಕರು ಮಾತನಾಡುವಾಗ ನಾವು ಸುಮ್ಮನೆ ಇರಲಿಲ್ಲವೇನು?

ಅಧ್ಯಕ್ಷರು : ನಿಮ್ಮ ನಾಯಕರು ಮಾತನಾಡುವಾಗ ಅವರು ಸುಮ್ಮನೆ ಇದ್ದರು ತಾನೆ? ಈಗ ಏಕೆ ಮಾತನಾಡುತ್ತೀರಿ? No. I don't like this kind of attitude Mr. Naidu... No. I don't like. I cannot tolerate.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಈ ಒಂದು ವಿಷಯದಲ್ಲಿ ಈ ಕರೀಂಲಾಲಾ ಪ್ರಕರಣದ ಈ ಪಾಪದ ಹಣದಲ್ಲಿ ಆ ಕಡೆಯವರೂ ಭಾಗಿಯಾಗಿದ್ದಾರೆ, ಈ ಕಡೆಯವರೂ ಭಾಗಿಯಾಗಿದ್ದಾರೆ. ಇವರು ಯಾರು ಬಿ.ಜೆ.ಪಿ. ಅಂತ ಹೇಳುತ್ತಾರೆ ಇವರಿಬ್ಬರೂ ಇದರಲ್ಲಿ ಭಾಗಿಯಾಗಿದ್ದಾರೆ. ಇಬ್ಬರೂ ಸೇರಿ ನೀವು ತೊಲಗಬೇಕು. ಈ ಪಾಪದ ಹಣದಲ್ಲಿ ನೀವಿಬ್ಬರೂ ಭಾಗಿಗಳು. ಬಿ.ಜೆ.ಪಿ. ಶಿವಸೇನೆ ಅಂತ ತಾವೂ ಭಾಗಿಯಾಗಿದ್ದೀರಿ. ಆದ್ದರಿಂದ ಇಬ್ಬರೂ ತೊಲಗಬೇಕು. ಇವರೂ ರಾಜೀನಾಮೆ ಕೊಡಬೇಕು, ಇಲ್ಲಿರುವ ಸರ್ಕಾರವೂ ರಾಜೀನಾಮೆ ಕೊಡಬೇಕು. ಎರಡೂ ಈ ಪಾಪದ ಹಣದಲ್ಲಿ ಭಾಗಿಯಾಗಿದ್ದಾರೆ. ಇವರಿಗೆ ಇಲ್ಲಿ ಮಾತನಾಡುವಂತಹ ಹಕ್ಕು ಇಲ್ಲ. ಪ್ರತಿದಿವಸ ಹೀಗೆ ರಾಜಕೀಯ ಮಾಡಿಕೊಂಡು ಮೂರು-ನಾಲ್ಕು ದಿವಸಗಳಿಂದ ಇದನ್ನೇ ಚರ್ಚೆ ಮಾಡಿಕೊಂಡು, ಧರಣಿ ಮಾಡಿಕೊಂಡು ಕೂರುವುದಾದರೆ, ಮಾತನಾಡಲಿಕ್ಕೆ ನಮಗೂ ಬರುತ್ತದೆ. ಆದರೆ ಆ ಕಡೆ ಸರ್ಕಾರದ್ದೂ ಜವಾಬ್ದಾರಿ ಇದೆ. ಯಾರ ಮೇಲೆ ಇವತ್ತು ಅನುಮಾನ, ಸಂಶಯಗಳನ್ನು

ತೋರಿಸುತ್ತಿದ್ದಾರೆ, ಮಾನ್ಯ ಗೃಹಸಚಿವರು ಹೇಳಬೇಕು. ಇವತ್ತು ಆಪಾದನೆ ಇರುವಂತಹ ರೋಷನ್ ಬೇಗ್‌ರಂಥ ಸಚಿವರು ಈ ದೇಶದ್ರೋಹಿ ಪ್ರಕರಣದಲ್ಲಿ ದೇಶ ಬಿಟ್ಟು ಹೋಗುವುದಕ್ಕೆ ಅವಕಾಶವನ್ನು ಸರ್ಕಾರ ಏಕೆ ಕೊಟ್ಟಿತು ಮತ್ತು ಸದನ ಇರುವಾಗ ಏಕೆ ಅವಕಾಶ ಕೊಟ್ಟಿರಿ ಎಂಬ ಒಂದು ನನ್ನ ಪ್ರಶ್ನೆಗೆ ಉತ್ತರ ಕೊಡಬೇಕು. ಆದ್ದರಿಂದ ಕೂಡಲೇ ಅವರು ಬರಬೇಕು ಮತ್ತು ಮುಂದೆ ತನಿಖೆ ಆಗುವಂಥಾದ್ದಕ್ಕೆ ಅವಕಾಶ ಮಾಡಿಕೊಡಬೇಕು. ಇದು ನಾನಾ ರೀತಿಯ ಅನುಮಾನ ಮತ್ತು ಸಂಶಯಕ್ಕೆ ಕಾರಣವಾಗಿದೆ.

ಅಧ್ಯಕ್ಷರು : ಇಲ್ಲಿ ಕೇಳಿ. ಇದಕ್ಕೆಲ್ಲಾ ಉತ್ತರ ಕೊಟ್ಟಿದ್ದಾರೆ. If it exceeds more than 15 days he must get our permission. Otherwise, it is not needed. ಅರ್ಥವಾಯಿತಲ್ಲ? ಅದು ನಮಗೆ ಗೊತ್ತಿಲ್ಲ ಅವರು ಬರುತ್ತಾರೋ ಬಿಡುತ್ತಾರೋ ಎಂದು. Am I responsible?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರಿಗೆ ನಾನು ಹೇಳತಕ್ಕದ್ದು ಏನೆಂದರೆ, ಪತ್ರಿಕೆಯಲ್ಲಿ ಬಂದಿರುವುದನ್ನು ಏನು ಮಾನ್ಯ ಶೆಟ್ಟರ್ ಅವರು ಪ್ರಸ್ತಾಪ ಮಾಡಿದರು ಅದರ ಬಗ್ಗೆ ಈಗಾಗಲೇ ಸ್ಟಾಂಪಿಟ್‌ನವರು ಕ್ರಮವನ್ನು ತೆಗೆದುಕೊಂಡಿದ್ದಾರೆ. ಈಗ ಅವರು ಕೋರ್ಟಿನಲ್ಲಿ ಅಪ್ಲಿಕೇಶನ್‌ನ್ನು ಹಾಕುತ್ತಿದ್ದಾರೆ. ಈ ರೀತಿಯಾಗಿ ಅವರು ಅಡ್ಮಿಟ್ ಮಾಡಿಕೊಳ್ಳಬೇಕು ಅಂತ ಹೇಳಿದ್ದಾರೆ ಎನ್ನತಕ್ಕದ್ದು ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದ್ದಾರೆ. ಒಂದು ವೇಳೆ ಅವರು ಪತ್ರಿಕೆಯಲ್ಲಿ ಹೇಳಿದ್ದುದು ಸರಿಯಿದ್ದರೆ ಅವರನ್ನು ಅವರ ವಕೀಲರ ಎದುರುಗಡೇನೆ ನಾವು ಇಂಟರಾಗೇಶನ್ ಮಾಡುವುದಕ್ಕೆ ರೆಡಿ ಇದ್ದೇವೆ ಎನ್ನತಕ್ಕಂಥ ಪಿಟಿಶನ್‌ನ್ನು ನಮ್ಮ ವಕೀಲರು ಇವತ್ತು ಸ್ಟಾಂಪಿಟ್ ಮೂಲಕ ಕೋರ್ಟಿಗೆ ಹಾಕಿದ್ದಾರೆ. ಕೋರ್ಟು ಪರ್ಮಿಶನ್ ಕೊಟ್ಟರೆ ಅವರ ವಕೀಲರ ಮುಂದೆಯೇ ಅವರು ಅಡ್ಮಿಶನ್ ಮಾಡುತ್ತಿದ್ದರು ಅಂದರೆ ಅದು ಇಂಟರಾಗೇಶನ್ ಮಾಡುವುದಕ್ಕೆ ಸ್ಟಾಂಪಿಟ್‌ನವರು ರೆಡಿ ಇದ್ದಾರೆ. ಅವರು ಕೋರ್ಟಿಗೆ ಈಗಾಗಲೇ ಹೋಗಿದ್ದಾರೆ ಮತ್ತು ಕೋರ್ಟು ಪರ್ಮಿಶನ್ ಕೊಟ್ಟರೆ ಇದನ್ನು ಖಂಡಿತವಾಗಿಯೂ ಮಾಡುತ್ತಾರೆ. ಇದರಲ್ಲಿ ಮುಚ್ಚಿಡುವ ಪ್ರಶ್ನೆಯೇ ಬರುವುದಿಲ್ಲ. ಯಾರಿಂದಲೂ ಹೇಳಿಕೊಂಡು ಮಾಡಿಸಲಿಕ್ಕೆ ನಾವು ಬಂದಿಲ್ಲ. ಇಲ್ಲಿ ದೇಶದ ವ್ಯವಸ್ಥೆಯನ್ನು ಸರಿಯಾಗಿ ಇಡಬೇಕೆಂದು ನಾವು ಬಂದಿದ್ದೇವೆ. ನಾವು ಪತ್ರ ಬರೆದರೂ ಒಂದು ವರ್ಷ, ಎರಡು ವರ್ಷ ಉತ್ತರ ಕೊಡದೇ ಇರುವವರು ನಮಗೆ ಬುದ್ಧಿ ಹೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ಸಿ.ಬಿ.ಐ. ಗೆ ಒಪ್ಪಿಸಿ ಎಂದರೆ ಅದಕ್ಕೆ ತಡಮಾಡಿದರು ಮತ್ತು ರೋಷನ್ ಬೇಗ್ ಅವರು ರಾಜೀನಾಮೆ ಕೊಡುವುದಕ್ಕೆ ತಡಮಾಡಿದರು. ನಾನಾ ರೀತಿಯ ಅನುಮಾನ, ಸಂಶಯ ಉಂಟಾಗುವಂತೆ ಈ ಸರ್ಕಾರ ಮಾಡಿದೆ. ಇದನ್ನು ಸಿ.ಬಿ.ಐ.ಗೆ ಒಪ್ಪಿಸುವುದಕ್ಕೆ ತಡಮಾಡಿದ್ದಾರೆ. ಅದೇ ರೀತಿ ಇವರಿಗೆ ರಾಜೀನಾಮೆ ಕೊಡುವುದಕ್ಕೆ ಮತ್ತು ಆಚೆ ಕಳುಹಿಸುವುದಕ್ಕೆ ಕೂಡ ತಡಮಾಡಿದ್ದಾರೆ. ಇದು ಯಾರ ವರ್ಚಸ್ಸಿನಿಂದ ಇವರು ಈ ರೀತಿ ಮಾಡಿದರು ಎನ್ನುವುದನ್ನು ಸರ್ಕಾರ ಹೇಳಬೇಕು.

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರೇ, ನೀವು ಹೇಳಿದ್ದು ಚರ್ಚೆಯಾಗಿದೆ. ಇದರ ಬಗ್ಗೆ ಮೂರು–ನಾಲ್ಕು ದಿವಸದಿಂದಲೂ ಚರ್ಚೆಯಾಗುತ್ತಿದೆ. ಮಾನ್ಯ ಸೋಮಶೇಖರ್‌ರವರೇ, ನೀವು ಮಾತನಾಡಿ.

†ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೇ, ಈ ವಿಚಾರಕ್ಕೆ ದಿನೆದಿನೇ ರಂಗು ಬರುತ್ತಿದೆ. ಒಂದು ದಿನಕ್ಕೆ ಒಂದೊಂದು ವಿಶೇಷವಾದಂಥ ಗುಟ್ಟುಗಳು ಹೊರಬರುತ್ತಿವೆ. ಸರ್ಕಾರ ಇದನ್ನು ಮುಚ್ಚಿಡತಕ್ಕಂಥ ಪ್ರಯತ್ನ ಏನೇ ಮಾಡಿದರೂ ಅದು ಸಾಧ್ಯವಾಗಲಿಲ್ಲ. ಇವರು ವಿಧಾನಸಭೆಯಲ್ಲಿ ಯಾವುದೇ ರೀತಿಯ ಹೇಳಿಕೆ ಕೊಡಬಹುದು, ಯಾವುದೇ ರೀತಿಯಲ್ಲಿ ಡಿಫೆಂಡ್ ಮಾಡಬಹುದು. ಆದರೆ ಸಾರ್ವಜನಿಕರ ಮನಸ್ಸಿನಲ್ಲಿ ಇವತ್ತು ಈ ಸರ್ಕಾರ ಶಾಮೀಲಾಗಿದೆ ಎನ್ನತಕ್ಕದ್ದು. ಅದು ಸರ್ಕಾರದ ಮಂತ್ರಿಗಳು, ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನತಕ್ಕದ್ದು ಸಾರ್ವಜನಿಕರಿಗೆ ಗೊತ್ತಾಗಿಬಿಟ್ಟಿದೆ ಮತ್ತು ಇಲ್ಲಿ ಕೇಂದ್ರ ಸರ್ಕಾರದ ಕೆಲವು ಮಂತ್ರಿಗಳು ಭಾಗಿಯಾಗಿದ್ದಾರೆ ಎನ್ನತಕ್ಕಂಥಾದ್ದು ಬಂದಿದೆ. ಈಗ ನಾವು ನಮ್ಮ ಪಕ್ಷದವರು ಏನು ಕೇಳುತ್ತಿದ್ದೇವೆ ಎಂದರೆ ಇವತ್ತು ತೆಲಗಿಯವರನ್ನು ಐದನೇ ತಾರೀಖು ಅವರ ವಕೀಲ ರೆಹಮಾನ್ ಎನ್ನುವವರು ಭೇಟಿ ಮಾಡಿದಾಗ ಅವರು ಏನು ಕನ್‌ಫೆಶನ್ ಮಾಡಿದ್ದಾರೆ, "ಈ ಸತ್ಯವನ್ನು ನಾನು ಹೇಳುವುದಕ್ಕೆ ತಯಾರಿದ್ದೇನೆ, ನಾನು ಇವತ್ತಲ್ಲ ನಾಳೆ ಸಾಯುವ ಪರಿಸ್ಥಿತಿಯಲ್ಲಿದ್ದೇನೆ". ಏಕೆಂದರೆ ಅವರಿಗೆ ಏನು ಭಯ ಬಂದಿದೆ ಎಂದರೆ ಈ ವ್ಯವಸ್ಥೆಯಲ್ಲಿ ಸತ್ಯ ಹೇಳುವುದಕ್ಕೆ ಅವಕಾಶ ಕೊಡುವುದಿಲ್ಲವೋ ಏನೋ ಎನ್ನುವಂಥ ಒಂದು-ಭಯ ಬಂದಿದೆ. ನಾನು ಮೊದಲೇ ಹೇಳಿದ್ದೇನೆ. ಹೆಚ್.ಐ.ವಿ. ಇಲ್ಲ ಅಂತ ಹೇಳಿ ಎರಡು ವರ್ಷ ಹಿಂದೆ ಇಲ್ಲದೇ ಇರತಕ್ಕಂಥಾದ್ದು ಇವತ್ತು ಹೆಚ್.ಐ.ವಿ. ಇದೆ ಎಂದು ಸ್ಟಾಂಪಿಟ್ ಮುಖಾಂತರ ಬಂದಿದೆ. ಇದನ್ನು ನೋಡಿದರೆ ಇವರೇ ಇಂಜೆಕ್ಷನ್ ಕೊಟ್ಟು ಅಥವಾ ಏನಾದರೂ ಮಾಡಿ ಇವರನ್ನು ಸಾಯಿಸತಕ್ಕಂಥ ಪರಿಸ್ಥಿತಿಯ ಬಗ್ಗೆ ಭಯವೂ ನಮ್ಮಲ್ಲಿ ಕಾಡುತ್ತಿದೆ. ಆದ್ದರಿಂದ ಅವರು ಮೊದಲೆಲ್ಲಾ ಹೇಳಿದ್ದಾರೆ. I love my country. In the letter that Telgi has signed, the kingpin adds, "I know I am going to die of HIV/ AIDS and I want to do all this by way of repentance. Everyone should get punishment for what he has done and no more. I sincerely wish to expose this entire racket of forged stamps and I am ready to make a full statement on the condition that Mr. Abdul Rehman should be present'. In a footnote to the letter, Telgi adds, " I have told my advocate Abdul Rehman everything and he will make a necessary statement". ಅಂತ ಹೇಳಿದ್ದಾರೆ. Dated January 5, 2004 was given to the Lawyer during their meeting at the Bangalore Central Jail ಅಂದರೆ ಇವರ ಕಸ್ಟಡಿಯಲ್ಲಿ ಇರುವಾಗಲೇ ತೆಲಗಿ ಈ ರೀತಿ ಹೇಳಿರತಕ್ಕದ್ದು ನೋಡಿದರೆ ಬಹುಶಃ ಕೇಂದ್ರದ ಮಂತ್ರಿಗಳೇ ಇದರಲ್ಲಿ ಶಾಮೀಲಾಗಿರಲಿ, ರಾಜ್ಯದ ಮಂತ್ರಿಗಳೇ ಶಾಮೀಲಾಗಿರಲಿ, ಅಥವಾ ಹಿಂದಿನ ಸರ್ಕಾರದಲ್ಲಿ ಇರತಕ್ಕಂಥ ಮಂತ್ರಿಗಳು ಶಾಮೀಲಾಗಿರಲಿ, ಅವರು ಸತ್ಯ ಹೇಳತಕ್ಕಂಥ ಒಂದು ಅಭಿಲಾಶೆಯನ್ನು ವ್ಯಕ್ತಮಾಡಿದ್ದಾರೆ. ಆದ್ದರಿಂದ ಈ ಸರ್ಕಾರ ತಕ್ಷಣ ಆ ಲಾಯರ್ ಮುಖಾಂತರ ಅಥವಾ ಯಾರಾದರೂ ಒಬ್ಬ ಇಂಪಾರ್ಶಿಯಲ್ ಡಿ.ಜಿ.ಪಿ. ಲೆವಲ್ ಅಧಿಕಾರಿಯ ಸಮ್ಮುಖದಲ್ಲಿ ಅವರ ಸ್ಟೇಟ್‌ಮೆಂಟ್‌ನ್ನು ತೆಗೆದುಕೊಳ್ಳಬೇಕು ಮತ್ತು ಅದನ್ನು ತೆಗೆದುಕೊಂಡು ತಕ್ಷಣ ಆ ಸ್ಟೇಟ್‌ಮೆಂಟ್‌ನಲ್ಲಿ ಆತ ಏನು ಹೇಳಿದ್ದಾನೆ ಎಂದು ಈ ಸದನದಲ್ಲಿ ಎರಡು-ಮೂರು ದಿವಸದೊಳಗೆ ಹೇಳಬೇಕು. ಇಲ್ಲದಿದ್ದರೆ ನಿಮ್ಮ ಸರ್ಕಾರ ಖಂಡಿತವಾಗಿಯೂ ಯಾವುದಾದರೂ

ಒಂದು ರೀತಿಯಲ್ಲಿ ಅವರನ್ನು ಸತ್ಯ ಹೇಳುವುದಕ್ಕೆ ಬಿಡದೆ ಅವರನ್ನು ಸಾಯಿಸತಕ್ಕಂಥ ಒಂದು ಅನುಮಾನ ನಮ್ಮಲ್ಲಿ ಕಾಡುತ್ತಿದೆ. ಆದ್ದರಿಂದ ತಕ್ಷಣ ಅವರು ಸ್ಟೇಟ್‌ಮೆಂಟ್ ಕೊಡಬೇಕು. ಇಲ್ಲದಿದ್ದರೆ ನಮಗೆ ಏನಾಗಿದೆ ಎಂದರೆ ಬಿ.ಜೆ.ಪಿ. ಮಂತ್ರಿಗಳೇ ಸೇರಿರಲಿ. ಕಾಂಗ್ರೆಸ್ ಮಂತ್ರಿಗಳೇ ಸೇರಿರಲಿ, ಅಥವಾ ನಿಮ್ಮ ಹಿಂದಿನ ಸರ್ಕಾರದಲ್ಲಿ ಇದ್ದಂಥ ಮಂತ್ರಿಗಳೇ ಸೇರಿರಲಿ ಯಾರೇ ಇದ್ದರೂ ಇದು ದೇಶದ್ರೋಹಿತನ. ನಾವು ಅವರಿಗೆ ರಕ್ಷಣೆ ಬೇಕು, ಇವರನ್ನು ಬಿಡಿ ಎಂದು ಹೇಳುತ್ತಿಲ್ಲ. ನಾವು ನಮ್ಮ ಪಕ್ಷದಿಂದ ಕೇಳುತ್ತಾ ಇರತಕ್ಕಂಥಾದ್ದು ಏನೆಂದರೆ ಯಾರೇ ಸೇರಿದರೂ ಸರಿ, ಅವರು ಕೊಡುವಂತಹ ಸ್ಟೇಟ್‌ಮೆಂಟ್‌ನ್ನು ರೆಕಾರ್ಡ್ ಮಾಡಿಕೊಳ್ಳಬೇಕು.

ಅಧ್ಯಕ್ಷರು : ಮಾನ್ಯ ಸೋಮಶೇಖರ್ ಅವರೇ, ಇದು ಕೋರ್ಟಿನಲ್ಲಿ ಇದೆ. ದಿನನಿತ್ಯದ ವ್ಯವಹಾರಗಳನ್ನು ಇಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೆ? ಹಾಗೆ ಮಾಡಿದರೆ ಸಬ್‌ಜ್ಯುಡಿಸ್ ಆಗುತ್ತದೆ. ಈ ಕೇಸ್ ಸುಪ್ರೀಂ ಕೋರ್ಟ್ ಮುಂದೆ ಇದೆ. ಗೊತ್ತೆ ನಿಮಗೆ? ಸುಮ್ಮನೆ ಅನಾವಶ್ಯಕವಾಗಿ ಮಾತನಾಡಬೇಡಿ. ಇದು ಸಬ್‌ಜ್ಯುಡಿಸ್ ಆಗುತ್ತದೆ. ಹಾಗೆ ಮಾಡುವುದು ಬೇಡ. I may receive a notice from the Supreme Court how you allowed ಅಂತ. ಆದ್ದರಿಂದ ಹುಶಾರಾಗಿ ಮಾತನಾಡಿ.

(ಗೊಂದಲ)

11.10 ಎ ಎಂ

ಅಧ್ಯಕ್ಷರು : ನಾವು ಏನು ಮಾಡುತ್ತಾ ಇದ್ದೇವೋ, ಅದಕ್ಕೊಂದು ಲಿಮಿಟ್ ಇರಬೇಕು. ಕೋರ್ಟಿನಲ್ಲಿ ಏನು ನಡೆಯುತ್ತಾ ಇದೆ. ಏನು ಎಂಬುದನ್ನು ಪ್ರತಿ ದಿನ ನಾವು ತಿಳಿದುಕೊಳ್ಳುವುದಕ್ಕಾಗುತ್ತದೆಯೇ? ಇದು ನ್ಯಾಯಾಲಯ ಅಲ್ಲ.

ಶ್ರೀ ಬಿ. ಸೋಮಶೇಖರ್ : ಸುಪ್ರೀಂ ಕೋರ್ಟಿನಲ್ಲಿದ್ದಾಗಲೂ ಚರ್ಚೆಗೆ ತಾವು ಅಲೋ ಮಾಡಿದ್ದೀರಿ.

ಅಧ್ಯಕ್ಷರು : ಸಬ್‌ಜುಡೀಸ್ ಆಗದೇ ಇದ್ದಹಾಗೆ ಮಾತನಾಡುತ್ತೇವೆಂದರೆ ಸ್ವಲ್ಪ ಮಾತನಾಡಿ. ಪ್ರತಿ ದಿನ ಕೋರ್ಟ್ ವಿಷಯಗಳನ್ನು ಚರ್ಚೆ ಮಾಡುವುದಕ್ಕಾಗುತ್ತದೆಯೇ? ಸುಪ್ರೀಂಕೋರ್ಟ್‌ನಲ್ಲಿರುವಾಗ, ನಾನು ಮಾಡಿದ್ದು ತಪ್ಪಾಯಿತು. ಸಬ್‌ಜುಡೀಸ್ ಆಗದಹಾಗೆ ನೀವು ಮಾತನಾಡಿ. ಅದು ನಿಮ್ಮ ಕರ್ತವ್ಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಏನು ಕೇಳಬೇಕಾಗಿತ್ತೋ ಅದನ್ನೆಲ್ಲಾ ಈಗಾಗಲೇ ಕೇಳಿದ್ದಾರೆ. ಅದಕ್ಕೆ ನಾವು ಉತ್ತರವನ್ನೂ ಕೊಟ್ಟಿದ್ದೇವೆ. ಈಗ ಮತ್ತೆ ಅವರು ಚರ್ಚೆ ಮಾಡಿದರೆ, ನಾವು ಮತ್ತೆ ಉತ್ತರವನ್ನು ಕೊಡಬೇಕೇ?

ಶ್ರೀ ಬಿ. ಸೋಮಶೇಖರ್ : ಸಿ.ಬಿ.ಐ. ನವರು ಇನ್ನೂ ವಿಚಾರಣೆ ಪ್ರಾರಂಭ ಮಾಡಿಲ್ಲ. ಇನ್ನೂ ಸ್ಟಾಂಪಿಟ್‌ನವರ ಕೈಯಲ್ಲೇ ಇದೆ.

ಅಧ್ಯಕ್ಷರು : ಸರ್ಕಾರದವರು ಉತ್ತರ ಹೇಳಿದ್ದಾರೆ. ಮತ್ತೆ ಇದರ ಬಗ್ಗೆ ಚರ್ಚೆ ಮಾಡುವುದು ಬೇಡ. ಈ ವಿಷಯ ಸುಪ್ರೀಂ ಕೋರ್ಟ್ ಮುಂದೆ Further discuss ಮಾಡಿದರೆ ಸಬ್‌ಜ್ಯುಡೀಸ್ ಆಗುತ್ತದೆ. ದಯವಿಟ್ಟು ಮತ್ತೆ ಕೇಳಬೇಡಿ.

ಶ್ರೀ ಬಿ. ಸೋಮಶೇಖರ್ : ಸ್ಟಾಂಪಿಟ್‌ನವರು ಕೆಲವು ಅಧಿಕಾರಿಗಳು ಶಾಮೀಲಾಗಿದ್ದಾರೆಂದು ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ.

ಅಧ್ಯಕ್ಷರು : ಈ ವಿಷಯ ಸುಪ್ರೀಂ ಕೋರ್ಟ್ ಮುಂದೆ ಇದೆ, ಹೈಕೋರ್ಟ್ ಮುಂದೆ ಇದೆ. ನೀವು ಇದನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಬಿ. ಸೋಮಶೇಖರ್ : ಆ ಅಧಿಕಾರಿಗಳು ಯಾರು ಯಾರು ಎಂಬುದನ್ನು ಹೇಳಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ತಾವು ಸಬ್‌ಜ್ಯುಡೀಸ್ ಆಗುತ್ತದೆಂದು ಹೇಳುತ್ತೀರಿ. ಯಾವುದು ಸಬ್‌ಜ್ಯುಡೀಸ್ ಆಗುತ್ತದೆ ಎಂಬುದನ್ನು ಹೇಳಿ. ಇಂತಹ ವಿಷಯ ಸಬ್‌ಜ್ಯುಡೀಸ್ ಆಗುತ್ತದೆ ಎನ್ನುವುದನ್ನಾದರೂ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇನ್ನೂ ಮಾತನಾಡುವುದೇನು ಉಳಿದಿದೆ? ಅವರೇನು ಕೇಳಬೇಕಾಗಿತ್ತು, ಅದನ್ನು ಕೇಳಿದ್ದಾರೆ. ನಾವು ಉತ್ತರ ಹೇಳುವುದನ್ನು ಹೇಳಿದ್ದೇವೆ. ಬಾಕಿ ಎಲ್ಲವನ್ನೂ ಕೋರ್ಟ್ ಮುಂದೆ ಹೋಗಿ ಹೇಳಿ. ಸಿ.ಬಿ.ಐ. ಮುಂದೆ ಹೋಗಿ ಸಾಬೀತು ಮಾಡಲಿ. ನಮ್ಮವರು ತಪ್ಪು ಮಾಡಿದ್ದರೆ, ಅವರ ವಿರುದ್ಧ ಹೋಗಿ, ಕೋರ್ಟ್ ಮುಂದೆ ಅಫಿಡೆವಿಟ್ ಹಾಕಲಿ.

(ಗೊಂದಲ)

ಅಧ್ಯಕ್ಷರು : ಸುಪ್ರೀಂ ಕೋರ್ಟಿನವರೇ ಡಿಸೈಡ್ ಮಾಡಬೇಕು, ನಾವಲ್ಲ. We cannot discuss.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಆಯಿತು, ಕೋರ್ಟಿನವರೇ ಫೈಲ್ ಮಾಡಲಿ.

ಮಾನ್ಯ ಸದಸ್ಯರು : ಅಧ್ಯಕ್ಷರೇ ಇವರಿಗೆ ಅನುಮಾನದಿಂದ ತೆಲಗಿ ಸಾಯುತ್ತಾನೆ ಎಂದು ಹೇಳಿದರೆ, ಅದು ಸಬ್‌ಜ್ಯುಡೀಸ್ ಆಗುವುದಿಲ್ಲವೇ ಎಂದು ಅವರನ್ನು ಕೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡಿ, ಕೋರ್ಟ್ ಮುಂದೆ ಫೈಲ್ ಮಾಡಲಿ; ಅದು ಸಬ್‌ಜ್ಯುಡೀಸ್ ಆಗುವುದಿಲ್ಲ. ಅದು ಪತ್ರಿಕೆಯಲ್ಲಿ ಬರುತ್ತದೆ.

ಅಧ್ಯಕ್ಷರು : ನೀವು ಪ್ರಶ್ನೋತ್ತರ ಮಾಡಲಿಕ್ಕೆ ಅಲೋ ಮಾಡಲೇ ಇಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್: ನಿಮ್ಮ ಕಡೆಯವರಿಗೂ ಗೊತ್ತಿದೆ, ನಮ್ಮ ಕಡೆಯವರಿಗೂ ಗೊತ್ತಿದೆ. ಫೋಟೋನೇ ತೋರಿಸಿದ ಮೇಲೆ ಮತ್ತೆ ಏನು ಉಳಿದಿದೆ ಈಗ? ಏನೂ ಉಳಿಯಲಿಲ್ಲ. ಏನಿದ್ದರೂ ಬಟ್ಟೆ ತೆಗಿಸಿ ತೋರಿಸಬೇಕು ಈಗ. ಯಾರು ಯಾರು ಏನೇನು ಮಾಡಿದ್ದಾರೆ ಎಂದು.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ. ಈಗಾಗಲೇ 45 ನಿಮಿಷ ನಾವು ಇದೇ ಚರ್ಚೆ ಮಾಡಿದ್ದೇವೆ.

ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ) : ಅಧ್ಯಕ್ಷರೇ, ನಾನು ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಇಬ್ಬರೂ ನಾಯಕರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನವನ್ನು ಸರಿಯಾಗಿ ನಡೆಸತಕ್ಕಂಥಾದ್ದು ಇಬ್ಬರದ್ದೂ ಜವಾಬ್ದಾರಿ ಇದೆ. ತಮಗೇನು ಜವಾಬ್ದಾರಿ ಇದೆ, ಅಷ್ಟೇ ಜವಾಬ್ದಾರಿ ಇವರದ್ದೂ ಇದೆ. ಇವತ್ತು ರಾಜ್ಯದಲ್ಲಿ ಭೀಕರ ಬರಗಾಲ, ಪರಿಸ್ಥಿತಿ ಬಹಳ ಕೆಟ್ಟಿದೆ, ಅದೆಲ್ಲಾ ಇಲ್ಲಿ ಚರ್ಚೆಯಾಗಬೇಕಾಗಿದೆ. ಆ ಸದಸ್ಯರ ಎಲ್ಲಾ ಅಭಿಪ್ರಾಯಗಳಿಗೆ ನಾನೂ ಒಪ್ಪಿಗೆ ಕೊಡುತ್ತೇನೆ. ಇದರಲ್ಲಿ ಏನಾಗಿದೆಯೆಂದರೆ, ರಾಜ್ಯ ಸರ್ಕಾರದವರ ಪರಿಸ್ಥಿತಿ ಏನು ಇದೆ, ಈ ಯಾವುದೇ ಚರ್ಚೆ ಅವರಿಗೂ ಬೇಡವಾಗಿದೆ. ಈ ದೃಷ್ಟಿಯಿಂದ ನಾನು ಇಬ್ಬರಲ್ಲೂ ದಯವಿಟ್ಟು ವಿನಂತಿ ಮಾಡಿಕೊಳ್ಳುತ್ತೇನೆ, ಇಬ್ಬರೂ ಮಾತನಾಡಿಕೊಂಡು ಈ ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಸದನ ನಡೆಸುವ ಬಗ್ಗೆ ತಮ್ಮ ಚೇಂಬರಿನಲ್ಲಿ ಕರೆದು ಮಾತನಾಡಿದ್ದೀರಿ. ಆದರೂ ಕೂಡ, ಇಲ್ಲಿ ನಡೆಯುತ್ತಾ ಇಲ್ಲ. ನಮ್ಮ ವಿರೋಧ ಪಕ್ಷದ ನಾಯಕರ ಬೇಡಿಕೆ ಏನಿದೆ, ಮಾನ್ಯ ರೋಷನ್ ಬೇಗ್‌ರವರು ಅಪರಾಧಿ ಇದ್ದಾರೆ, ಅವರನ್ನು ಬಂಧಿಸಿರಿ ಎಂದು ಇದೆ. ಇಲ್ಲದೇ ಹೋದರೆ, ಅವರು ಅಪರಾಧಿ ಅಲ್ಲವೆಂಬ ಮಾತನ್ನಾದರೂ ಹೇಳಿ ಎಂಬ ಒಂದು ಮಾತು ಹೇಳಿದ್ದಾರೆ. ಆದರೆ ಇವತ್ತು ಆ ಪಕ್ಷದ ಪ್ರಧಾನ ಕಾರ್ಯದರ್ಶಿ ವಯಲಾರ್ ರವಿ ಎಂಬುವರು ಒಂದು ಹೇಳೀಕೆ ಕೊಟ್ಟಿದ್ದಾರೆ. ಮಾನ್ಯ ರೋಷನ್ ಬೇಗ್‌ರವರು ಅಪರಾಧಿ ಅಲ್ಲವೆಂದು ಹೇಳಿದ್ದಾರೆ. ಇವರು ಇಲ್ಲಿ ಹೇಳಿಬಿಟ್ಟರೆ, ಅಲ್ಲಿಗೆ ಮುಗಿದು ಹೋಗುತ್ತದೆ. ಅವರ ಪ್ರಧಾನ ಕಾರ್ಯದರ್ಶಿ, ಅಪರಾಧಿ ಅಲ್ಲವೆಂದು ಹೇಳುತ್ತಿದ್ದಾರೆ. ಅದೇ ಮಾತನ್ನು ಇಲ್ಲಿ ಗೃಹಸಚಿವರು, ಅವರು ಅಪರಾಧಿ ಅಲ್ಲವೆಂದು ಹೇಳಿಬಿಟ್ಟರೆ, ನಾವು ವಿರೋಧ ಪಕ್ಷದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಚರ್ಚೆ ನಡೆಯಲಿ, ಮುಂದೆ ನೋಡೋಣವೆಂದು ಹೇಳುತ್ತೇವೆ. ಅವರು, ಅದನ್ನಾದರೂ ಹೇಳ್ಲಲಿ. ಸುಮ್ಮನೆ ಸದನ ನಡೆಯದ ಹಾಗೆ ಇವರು ವ್ಯವಸ್ಥೆ ಮಾಡಿಕೊಂಡು ಕೂತರೆ, ನಾವೇನು ಮಾಡುವುದು? ಅವರ ಮೇಲೆ, ಇವರು ಕೆಸರು ಎರಚುವುದು!

ಶ್ರೀ ಬಿ. ಸೋಮಶೇಖರ್ : ಇಬ್ಬರೂ ಸಹಕಾರ ಕೊಟ್ಟರೆ, ಮತ್ತೆ ರಿವ್ಯೂ ಮಾಡಬಹುದು. ಐದು ನಿಮಿಷದಲ್ಲಿ ಮತ್ತೆ ಈ ಸದನ ಸೇರಬಹುದು. ಸರ್ಕಾರದವರು ಏನು ಸಹಕಾರ ಕೊಡಬೇಕೆಂದರೆ, ಈಗಾಗಲೇ, ಸ್ಟಾಂಪಿಟ್‌ನವರು ವಿಚಾರಣೆ ನಡೆಸುತ್ತಾ ಇದ್ದಾರೆ. ಏಕೆಂದರೆ, ಸಿ.ಬಿ.ಐ. ಇನ್ನೂ ವಿಚಾರಣೆ ಪ್ರಾರಂಭ ಮಾಡಿಲ್ಲ. ಈ ಸ್ಟಾಂಪಿಟ್‌ನವರು 'ಒಂದು ವರದಿ ಕಳುಹಿಸಿ ಕೆಲವು ಅಧಿಕಾರಿಗಳ ಹೆಸರುಗಳನ್ನು ಸೂಚಿಸಿ, ಇವರು ಇದರಲ್ಲಿ ಭಾಗಿಯಾಗಿದ್ದಾರೆ. ಕಿಂಗ್ ಪಿನ್ ಕರೀಂಲಾಲನ ಜೊತೆಗೆ ಭಾಗಿಯಾಗಿದ್ದಾರೆ ಎಂದು ಹೇಳಿದ್ದಾರೆ. ಈ ರೀತಿ ವಿಚಾರಣೆ ನಡೆಸುತ್ತಾ ಇರುವಾಗ, ರೆಹಮಾನ್‌ರವರ ಅಡ್ವೋಕೇಟ್ ಮುಖಾಂತರ ಹೇಳಿಕೆ ತೆಗೆದುಕೊಳ್ಳಬೇಕು. ನನ್ನ ಪ್ರಾಣಕ್ಕೆ ಭಯವಿದೆಯೆಂದು ಹೇಳಿದಾಗ, ಇವರು ಒಂದು ಹೇಳಿಕೆ ಕೊಟ್ಟು, ಸ್ಟಾಂಪಿಟ್‌ನವರೇ ಇನ್ನೂ ವಿಚಾರಣೆ ನಡೆಸುತ್ತಾ ಇರುವುದರಿಂದ ಒಬ್ಬರು ಸೀನಿಯರ್ ಅಧಿಕಾರಿಗಳ ಸಮ್ಮುಖದಲ್ಲಿ, ಸ್ಟಾಂಪಿಟ್‌ನವರೇ ಕರೀಂಲಾಲಾನ ಸ್ಟೇಟ್‌ಮೆಂಟ್‌ನ್ನು ರೆಕಾರ್ಡ್ ಮಾಡಿಕೊಳ್ಳಲಿ. ಮತ್ತು ಅವರ ಪಕ್ಷದ ಅಧಿಕೃತ ವಕ್ತಾರರು ಹೇಳಿರುವ

ಪ್ರಕಾರ, ಇಲ್ಲಿ ಈ ಸ್ಟೇಟ್‌ಮೆಂಟ್ ಹೇಳಲಿ. ಏಕೆಂದರೆ, ಪಕ್ಷದ ವಕ್ತಾರರು ಹೊರಗಡೆ ಹೇಳುವುದೊಂದು, ಸರ್ಕಾರ ಇಲ್ಲಿ ಮತ್ತೊಂದು ಹೇಳುವುದು ಆದರೆ ಅನುಮಾನ ಬಂದಿದೆ. ಅದನ್ನೇ ಇವರು ಹೇಳಿಬಿಡಲಿ. ವಿಚಾರಣೆ ಏನು ಬರುತ್ತದೋ ಬರಲಿ. ಆದರೆ, ಈ ಸದನದಲ್ಲಿ ಮುಖ್ಯವಾಗಿ ಈ ವಿಚಾರ 4–5 ದಿನಗಳಿಂದ ಚರ್ಚೆಯಾಗಿರುವುದರಿಂದ ಸರ್ಕಾರ ಒಂದಲ್ಲ ಒಂದು ರೀತಿ ಹೇಳಿಕೆ ಕೊಡಬೇಕು. ಮಾನ್ಯ ರೋಷನ್ ಬೇಗ್‌ರವರು ಇದರಲ್ಲಿ ಶಾಮೀಲು ಆಗಿದ್ದಾರೆ ಅಥವಾ ಇಲ್ಲ ಎಂಬುದರ ಬಗ್ಗೆ ಏನಾದರೂ ಹೇಳಲಿ. ವಿಚಾರಣೆ ಬಂದಾಗ ಅದು ಗೊತ್ತಾಗಲಿ. ಏಕೆಂದರೆ, ಅಲ್ಲಿ ಪ್ರಧಾನ ಕಾರ್ಯದರ್ಶಿಯವರು ಒಂದು ಹೇಳುವುದು, ಇಲ್ಲಿ ನೀವೊಂದು ಹೇಳುವುದು ಆಗುವುದಾದರೆ, ಇದರಲ್ಲಿ ಅನುಮಾನಾಸ್ಪದ ಬರುತ್ತದೆ. ಇದರಿಂದ ನಿಮಗೇ ಕೆಟ್ಟ ಹೆಸರು ಬರುತ್ತದೆ. ನೀವು ಏನಾದರೂ ನಿಜವಾಗಿಯೂ ಜನಗಳಿಗೆ ಮುಖ ತೋರಿಸುವ ಹಾಗಿದ್ದರೆ, ಚುನಾವಣೆ ಎದುರಿಸತಕ್ಕ ಇಚ್ಚೆ ಇದ್ದರೆ, ಲೋಕಸಭೆ ಚುನಾವಣೆ ಜೊತೆಯಲ್ಲಿಯೇ ಚುನಾವಣೆ ಎದುರಿಸತಕ್ಕ ಇಚ್ಚೆ ಇದ್ದರೆ, ಈ ಎಂಬರಾಸ್‌ಮೆಂಟ್‌ನಿಂದ ನೀವು ತಪ್ಪಿಸಿಕೊಳ್ಳಬೇಕು. ಆದ್ದರಿಂದ ಇದನ್ನು ಅವರು ಹೇಳಿಬಿಟ್ಟರೆ, ನಾವು ಇವರನ್ನೂ ರಿಕ್ವೆಸ್ಟ್ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು : ಹೋಮ್ ಮಿನಿಸ್ಟರು ಈಗಾಗಲೇ ಹೇಳಿದ್ದಾರೆ. ನಾವು ಏನೇನು ಹೇಳಬೇಕೋ ಎಲ್ಲಾ ಹೇಳಿದ್ದೇವೆ. ಇನ್ನೇನೂ ಹೇಳುವುದಿಲ್ಲವೆಂದು ಹೇಳಿದ್ದಾರಲ್ಲಾ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಮಗೆ ಭಯ ಏನಿದೆ ಸ್ವಾಮಿ? ಎದುರಿಸತಕ್ಕ ಶಕ್ತಿ ಇದೆ, ಎದುರಿಸಿಯೇ ಎದುರಿಸುತ್ತೇವೆ. ಅದಕ್ಕೋಸ್ಕರ ಹೆದರಿಕೆ ಏನೂ ಇಲ್ಲ.

ಅಧ್ಯಕ್ಷರು : ದಯವಿಟ್ಟು ಇಲ್ಲಿ ಕೇಳಿ. It is not proper to rely on newspaper report and make suggestions on that basis ಎಂದು ರೂಲಿಂಗ್ ಕೊಟ್ಟಿದ್ದಾರೆ. ಪ್ರತಿ ದಿನ ಪೇಪರಿನಲ್ಲಿ ಬರುತ್ತಲೇ ಇರುತ್ತದೆ. ಬರೀ ಅದರ ಬಗ್ಗೆಯೇ ಮಾತನಾಡುತ್ತಾ ಹೋಗುವುದಕ್ಕಾಗುತ್ತದೆಯೇ? ರೆಗ್ಯುಲರ್ ವರ್ಕ್ ಯಾವಾಗ ನಡೆಯುವುದು, ಅದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಈ ಪತ್ರಿಕೆಯಲ್ಲಿ.....

ಅಧ್ಯಕ್ಷರು : ಇಲ್ಲ, ಆಗುವುದಿಲ್ಲ, ದಯವಿಟ್ಟು ಒಂದು ಕೆಲಸ ಮಾಡಿ. ನೀವು ಎಲ್ಲಾ ಓದಿದ್ದೀರಿ. ಎಲ್ಲಾ ಪಕ್ಷಗಳವರೂ ಹೇಳಿದ್ದಾರೆ. ನಾನು ಕೇಳಿದ್ದೇನೆ. ಅರ್ಧ ಗಂಟೆ ಸಭೆಯನ್ನು ಮುಂದಕ್ಕೆ ಹಾಕುತ್ತೇನೆ. ಎಲ್ಲಾ ನಾಯಕರೂ ನನ್ನ ಚೇಂಬರಿಗೆ ಬನ್ನಿ.

ಶ್ರೀ ಜಗದೀಶ್ ಶೆಟ್ಟರ್ : ಹಾಗಾದರೆ, ಪತ್ರಿಕೆಯಲ್ಲಿ ಬಂದುದ್ದನ್ನು ನಾವು ಏನನ್ನೂ ಹೇಳಬಾರದೇ?..

ಅಧ್ಯಕ್ಷರು : ಈಗ ಅರ್ಧ ಗಂಟೆ ಸದನವನ್ನು ಮುಂದಕ್ಕೆ ಹಾಕುತ್ತಿದ್ದೇನೆ. ಸದನವು ಪುನಃ 12 ಗಂಟೆಗೆ ಸೇರುತ್ತದೆ.

(ಸದನವು 11–17ಕ್ಕೆ ಮುಂದೂಡಲ್ಪಟ್ಟು ಮತ್ತೆ 12 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 12.58 ನಿಮಿಷಕ್ಕೆ ಸಮಾವೇಶಗೊಂಡಿತು)

ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ)ನವರು ಅಧ್ಯಕ್ಷ ಪೀಠವನ್ನಲಂಕರಿಸಿದರು

ಅಧ್ಯಕ್ಷರು : ಈ ವಿಷಯದ ಬಗ್ಗೆ ಇನ್ನೂ ಮಾತುಕತೆ ನಡೆಯುತ್ತಿದೆ. ಆದ್ದರಿಂದ ಈಗ ಸದನವನ್ನು ಮಧ್ಯಾಹ್ನ ಮೂರು ಘಂಟೆವರೆಗೆ ಮುಂದೂಡುತ್ತಿದ್ದೇನೆ. ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವು 1.00 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು 3.10 ಘಂಟೆಗೆ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ)ನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸದನದ ಬಾವಿಯಲ್ಲಿ ನಿಂತು ಧರಣಿ ಮಾಡುತ್ತಿದ್ದರು)

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ, ದಯವಿಟ್ಟು ತಾವುಗಳು ತಮ್ಮ ತಮ್ಮ ಸ್ಥಳಕ್ಕೆ ಹೋಗಿ.

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳೆಲ್ಲರೂ ಕೂಡ ತಮ್ಮ ಸ್ಥಾನಗಳಿಗೆ ತೆರಳಿದರು)

3. ಪ್ರಕಟಣೆ

ವಿಷಯ :– ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆರವರು ನಿಧನ ಹೊಂದಿದ ಬಗ್ಗೆ

ಅಧ್ಯಕ್ಷರು : ಮಾನ್ಯ ಸದಸ್ಯರುಗಳಿಗೆ ಒಂದು ಅತೀವ ದುಃಖದ ಸಂಗತಿಯನ್ನು ತಿಳಿಸಬೇಕಾಗಿದೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರದ ಮಾಜಿ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇಂದು 2 ಘಂಟೆಗೆ ನಿಧನ ಹೊಂದಿದ್ದಾರೆ. ಇಂದು ಮಾನ್ಯ ಸದಸ್ಯರುಗಳೆಲ್ಲರೂ ಮಾನ್ಯ ಹೆಗಡೆಯವರ ಪಾರ್ಥಿವ ಶರೀರವನ್ನು ನೋಡಲು ಹೋಗಬೇಕಾಗಿರುವುದರಿಂದ ಈಗ ಸಭೆಯನ್ನು ಮುಂದೂಡುತ್ತಿದ್ದೇನೆ. ನಾಳೆ ಸಂತಾಪ ಸೂಚನೆಯನ್ನು ಮಂಡಿಸಲಾಗುವುದು. ಈಗ ಸದನವನ್ನು ನಾಳೆ ಬೆಳಿಗ್ಗೆ 10.30ರವರೆಗೆ ಮುಂದೂಡುತ್ತಿದ್ದೇನೆ.

(ಸಭೆಯು 3.15 ಘಂಟೆಗೆ ಮುಂದೂಡಲ್ಪಟ್ಟು ಮತ್ತೆ ನಾಳೆ ದಿ: 13ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

* * *

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನೂ ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)